ಕರಿಮುಖದ ಗಣಪತಿಯ ಚರಣಕ್ವಂದನೆ ಮಾಡಿ

ಶಾರದೆಗೆ ಶಿರಬಾಗಿ ಬೇಡಿಕೊಂಬುವೆ ನಾನು

ಒಲಿದೆನಗೆ ವರವ ಕೊಡುಯೆಂದು ೧

ಅಜ ಭವ ನಾರಂದ ಸುಜನತ್ವಂದಿತ ವಾಯು ಮುದದಿಂದ ಮುದ್ದು ಮಾಲಕ್ಷ್ಮಿನಾರಾಯಣರ ಅಂಬುಜ ಪಾದಕ್ಕೆರಗಿ ನಮೋಯೆಂಬೆ ೨

ಪದಮನಾಭ ಹರಿಗೆ ನಿಜ ಭಕ್ತರಾದಂಥ

ಬುಧ ಬೃಹಸ್ಪತಿಗಳ ಕಥೆಯ ಪೇಳುವೆ ನಾನು

ಮುದದಿಂದ ಕೇಳಿ ಜನರೆಲ್ಲ ೩

ಇರುತಿದ್ದ ಬಡವ ಬ್ರಾಹ್ಮಣ ಒಂದು ಪಟ್ಟಣದಿ

ಮಡದಿ ಮಕ್ಕಳು ನಾಲ್ಕು ಮಂದಿ ಸುತರು ಸೊಸೆಯರೊಡಗೂಡಿಕೊಂಡು ಸುಖದಿಂದ ೪

ಒಬ್ಬೊಬ್ಬ ಸುತಗಿಬ್ಬಿಬ್ಬರು ಗಂಡಸು ಮಕ್ಕಳು ವಿಧ್ಯುಕ್ತದಿಂದ ಜಾವಳ ಜುಟ್ಟು ಉಪನಯನ

ಶುದ್ಧಾತ್ಮರಾಗಿ ಇರುತಿಹರು ೫

ಪ್ರಾತಃಕಾಲದೊಳೆದ್ದು ನಾಲ್ಕು ಮಂದಿ ಸುತರು

ಗೋಪಾಳ ಜೋಳ ನಾಲ್ಕು ಸೇರು ಕಾಳು

ತಂಬ್ಲಾಕೋರು ಅರ್ಧಗ್ರಾಸವನು ೬

ಮೂರು ಪಾವು ಹಿಟ್ಟು ಮುಂಜಾನೆಗೆ ಇಟ್ಟು ಮುಂದುಳಿದ ಗ್ರಾಸ ಮುದ್ದೆ ಅಂಬಲಿ

ಕಾಸಿಕೊಂಡುಂಡು ಕಾಲ ಕಳೆವೋರು ೭

ಒಂದಾನೊಂದಿನದಲ್ಲಿ ಬಂದರಿಬ್ಬರು ದ್ವಿಜರು

ಮಂದಿರದ ದ್ವಾರದಲಿ ನಿಂತು ಕೂಗುತಿರೆ ಬಂದಳೊಬ್ಬಿರಿಯ ಸೊಸೆ ತಾನು ೮

ದಾರು ಬಂದವರು ನಿಮ್ಮ ನಾಮವೇನೆಂದೆನುತ

ಬಾಗಿ ಶಿರಗಳನೆ ಚರಣಕ್ವಂದನೆ ಮಾಡಿ

ಭಾಳ ಭಕ್ತಿಂದ ಕರೆದಳು ೯

ದಾರಾದರೇನಮ್ಮ ಬಾಯಾರಿ ಬಳಲುತಲಿ

ಮೂರು ನಿರಾಹಾರ ಮಾಡಿ ಬಂದೆವು ನಾವು

ಆಹಾರ ನೀಡಿ ಕಳಿಸೆಂದ್ರು೧೦

ಭಿಕ್ಷಕೆ ಹೋದವರು ಈ ಕ್ಷಣದಿ ಬರುವೋರು

ಅರೆಕ್ಷಣ ನೀವು ತಡೆದರೆ ಜೋಳದ

ಭಕ್ಷ್ಯವನೆ ಮಾಡಿ ಬಡಿಸುವೆನು ೧೧

ಹೊತ್ತು ಭಾಳಾಯಿತು ಹಸ್ತವು ನಮ್ಮೊಟ್ಟೆ

ತುತ್ತನ್ನ ಹಾಕಿದರೆ ಈಗ ನಾವದನುಂಡು

ತೃಪ್ತರಾಗ್ಧರಸಿ ನಡೆದೇವು ೧೨

ಮಡಿವುಟ್ಟು ಮಾಡಿದೆನು ಮುಂಜಿಮನೆಗಳಿಗಡಿಗೆ

ತಡೆಯದೆ ಸ್ನಾನಮಾಡಿ ಬನ್ನಿರೆಂದು

ನುಡಿದಳು ಬ್ಯಾಗ ಪತಿವ್ರತೆ ೧೩

ನಾಲ್ಕು ಭಕ್ಕರಿಯೊಳಗೆ ಎಂಟರ್ಧವನು ಮಾಡಿ ಎಂಟುಮಕ್ಕಳಿಗೆ ಬಡಿಸೋ ಗ್ರಾಸವನು

ಸಂತೋಷದಿಂದ ಬಡಿಸುವೆನು ೧೪

ಸ್ನಾನ ಸಂಧ್ಯಾನವ ಮಾಡಿ ಬಂದೇವೆನಲು

ತಾನು ಎಡೆಮಾಡಿ ಎರಡೆರಡು ಭಕ್ಕರಿಯ ನೀಡಿದಳು ಭಾಳ ಭಕ್ತಿಂದ ೧೫

ಬೆಣ್ಣೆ ಬೆಲ್ಲ ತುಪ್ಪ ಕರಣೆ ಕರಣೆ ಕೆನೆಮೊಸರು ನುಣ್ಣನೆ ತವ್ವ ಅರೆದಕೊಬ್ಬರಿ ಖಾರ ಉಣ್ಣಿರೆಂದ್ದಾಕುತಿರಲಾಗ ೧೬

ಸಡಗರದಲದನುಂಡು ಕುಡಿದು ಮ್ಯಾಲ್ ಮಜ್ಜಿಗೆಯ ಒಡೆದಡಿಕೆಯೆಲೆ ಕೊಟ್ಟು ಕೇಳುತ ನಿಮ್ಮ

ನಡೆವೊ ನಾಮೇನು ಹೇಳೆಂದು ೧೭

ಇಂದುಸುತ ಸುರರ ಗುರುವೆಂದು ಪೇಳುವ ನಮಗೆ

ಬಂದೆವು ನಾವು ಬುಧ ಬೃಹಸ್ಪತಿಗಳು

ಆನಂದವಾಯಿತು ನಮಗೆಂದ್ರು ೧೮

ಅನ್ನ ಬೇಕಾದರೆ ಅಡಿಗೆ ಒಲೆಗೋಡೆಯಲಿ ನಮ್ಮನ್ನ ಬರೆದು ಪೂಜೆ ಮಾಡಿದರೀಗ ಅನ್ನವನು ನಾವು ಕೊಡುವೆವು ೧೯

ಭಾಗ್ಯ ಬೇಕಾದರೆ ಬರೆದು ಪೆಟ್ಟಿಗೆ ಮ್ಯಾಲೆ ಭಾಳ ಭಕ್ತಿಂದ ಪೂಜೆ ಮಾಡಿದರೆ

ಭಾಗ್ಯ ಕೊಡುವೆವೆಂದ್ದೇಳಿ ನಡೆದರು ೨೦

ಸುಣ್ಣಸಾರಣೆಮಾಡಿ ಬಣ್ಣ ಚಿತ್ರವ ಬರೆದು

ಚೆನ್ನಾಗಿ ಬರೆದು ಬುಧ ಬೃಹಸ್ಪತಿಗಳನೆ

ಮನ್ನಿಸಿ ಪೂಜಿಸಿದಳಾಗ ೨೧

ಹಚ್ಚೆಟ್ಟು ಗಂಧಾಕ್ಷತೆ ಪುಷ್ಪಗಳ ಉತ್ರಾಣಿ ಅಕ್ಕಿ ಮಂತ್ರಾಕ್ಷತೆ ಮಾಡಿ

ಭಕ್ತಿಂದ ಪೂಜಿಸಿದಳಾಗ ೨೨

ಗೋಪಾಳಕ್ಕೋದಲ್ಲಿ ಗೋಧಿ ಅಕ್ಕಿ ಬ್ಯಾಳೆ

ಹಾಕುವರು ನಾಲ್ಕು ಬೀದಿಯಲಿ ಅದು ಗಂಟು ತಾವ್‌ಕಟ್ಟಿ ಹೊತ್ತರ್ಹೆಗಲಲ್ಲಿ ೧೩

ಹಿಡಿಜೋಳ ಬೇಡಿದರೆ ಪಡಿಜೋಳ ಹಾಕುವರು

ಬಡವರು ನೀವು ಬನ್ನಿರೆಂದು ಕರೆದು

ಹಿಡಿಹಿಡಿ ರೊಕ್ಕ ಕೊಡುವೋರು ೧೪

ಭರದಿಂದ ಬಂದಾಗ ಸುರುವಿದರು ಧಾನ್ಯವನು

ಬರೆದಂಥ ಗೊಂಬೆ ನೋಡಿ ಕೇಳುತ ಅದರ

ವಿವರವನು ಹೇಳಬೇಕೆನುತ ೧೫

ಇವರು ಬುಧ ಬೃಹಸ್ಪತಿಗಳೆಂಬೊ ದೇವತೆಗಳು ಇವರು ಬಂದೆನ್ನ ಮನೆಯಲ್ಲೂಟವನುಂಡು ಒಲಿದ್ವರವ ಕೊಟ್ಟು ನಡೆದರು ೧೬ ಇಂಥವರ ಪುಣ್ಯದಿಂದೀ ಧಾನ್ಯ ದೊರಕಿದವು

ನಿರಂತರದಿ ನಮ್ಮ ಮನೆಯಲ್ಲಿಟ್ಟವರನು

ಸಂತೋಷದಲಿ ಪೂಜಿಸುವಣೆಂದು೧೭

ಭಾಳ ಅನ್ನವ ಮಾಡು ಜೋಳ ಭಕ್ಕರಿ ಮಾಡು

ಬ್ಯಾಳೆಯ ತಟ್ಟೆ ಬೆಲ್ಲ ಪಲ್ಯವು ಬೆಣ್ಣೆ ಮಾಡಿ ನೈವೇದ್ಯಕ್ಕಿಡುಯೆಂದು೧೮

ದಿನದಿನದಿ ಧನಧಾನ್ಯ ಘನವಾಗಿ ಬರುವೋದು ಮನೆಯಲ್ಲೆ ಸುಖವು ಮನಕೆ ಬಂದ

ದೇಶವನು ನೋಡಿ ಬರುವೆನೆಂದಾಗ ೧೯

ಅರವಟ್ಟಿ ಅಷ್ಟದಾರಿದ್ರ ಹಿಂದಾಯಿತು

ಸರ್ವರಾಜ್ಯವನೆ ನೋಡಿ ಬರುವೆನೆಂದು

ನಡೆದನೊಬ್ಬಿರಿಯ ಮಗ ತಾನು ೨೦

ಚಂದ್ರವತಿ ಚಂದ್ರಶೇಖರನೆಂಬೊ ರಾಜನು ಅಂದು ಸ್ವರ್ಗಸ್ಥನಾಗಿರಲು ರಾಜ್ಯಕ್ಕೆ ಮುಂದೊಬ್ಬ ಅರಸು ಬರಲೆಂದ್ರು ೨೧

ಆನೆ ಕೈಯಲ್ಲಿ ವನಮಾಲೆ ಕೊಟ್ಟಿರಲಾಗ ತಾನು ನಡೆದ್ಯೋಗಿ ಆ ದ್ವಿಜನ ಕೊರಳಲ್ಲಿ

ಹಾಕಿತಾಗಾನೆ ಹರುಷದಲಿ ೨೨

ಬಡವ ಬ್ರಾಹ್ಮಣಗಿಂಥ ಪೊಡವಿಪಾಲಕತನವು ಕೊಡಲಾಗದಿನ್ನು ನಡೆ ನಡೆಯೆಂದೆನುತ

ದೂಡಿದರು ಊರ ಹೊರಗಾಗ ೨೩

ಮತ್ತೊಂದು ಮಾಲೆಯನು ಕೊಟ್ಟರೋಡುತ ದ್ವಿಜನ

ಕುತ್ತಿಗೆಲ್ಹಾಕಿ ತನ್ನ ಸೊಂಡಿಲಿನಿಂದ

ಎತ್ತಿಕೊಂಡೊಯ್ದಿತಾ ಗಜವು ೩೪

ಲಕ್ಷ್ಮಿ ಒಲಿದವರನಾಲಕ್ಷ್ಯ ಮಾಡುವುದೇನು ಸಾಕ್ಷಾತ ದೊರೆಯು ಈತನೆಂದು ತಿಳಿದು

ಕಟ್ಟಿದರು ಪಟ್ಟವನು ಬ್ಯಾಗ ೩೫

ಅರಸಾಗಿ ನಮ್ಮವರ ಕರೆಸಿಕೊಂಬುವೆನೆಂದು

ಬರೆಸಿ ಭಕ್ತಿಯಲಿ ಬುಧ ಬೃಹಸ್ಪತಿಗಳನೆ

ಹರುಷದಲಿ ಪೂಜಿಸುತಲಿದ್ದ ೩೬

ಮತ್ತವರ ಮಂದಿರಕೆ ಬಂದ್ರು ಬುಧ ಬೃಸ್ಪತಿಯು

ಸ್ವಸ್ಥವೇ ಕ್ಷೇಮವೆಂತೆಂಬ ವಾರೆಯನು

ಕೇಳಿದರು ಪರಮ ಕರುಣದಲಿ ೩೭

ಕರಮುಗಿದು ಕರೆತಂದು ಚರಣಕ್ವಂದನೆ ಮಾಡಿ

ಪರಮ ಆದರದಿ ಪೀಠವ ಹಾಕಿ ಕುಳ್ಳಿರಿಸಿ

ಕ್ಷೇಮವು ನಿಮ್ಮ ಕರುಣದಿಂದೀಗ ೩೮

ಬಂದಿರಿ ದಯಮಾಡಿ ಉಂಡೋಗೋದೆನುತಲಿ

ಮಂಡಿಗೆ ಫೇಣಿ ಮಾಡೋದಕ್ಕೆ ಮರಗೋಧಿ

ತಂದರು ಸಕಲ ಸಾಹಿತ್ಯ ೩೯

ನಮಗೇನು ಬ್ಯಾಡಮ್ಮನವಲಿ ಪಾಕದ ಭಕ್ಷ್ಯ ನವನೀತ ಶಾಖ ಶಂಕ್ರಿಗಂಡನ ಅಡಿಗೆ

ಸವಿಯಾಗಿ ಮಾಡಿ ಬಡಿಸೆಂದ್ರು ೪೦

ಮೃಷ್ಟಾನ್ನವು ಜೋಳದ್ದಿಟ್ಟಿನ ಭಕ್ಕರಿಯು

ತುಪ್ಪ ಕೆನೆಮೊಸರು ತುಂಬಾಯಿ ರುಚಿಯಾದ

ಚಟ್ಟಣಿ ಶಾಖ ಸೂಪ ಶಾಲ್ಯಾನ್ನ೪೧

ಜೋಡಿಸಿ ಮಣೆಹಾಕಿ ಜ್ಯೋತಿಗಳನ್ನಚ್ಚಿಟ್ಟು

ಕೂಡಿಸಿದರಾಗ ಕುಡಿಬಾಳೆಯೆಲೆಯಲ್ಲಿ

ಮಾಡಿದ್ದಡಿಗೆ ಬಡಿಸಿ ಭಕ್ತಿಂದ ೪೨

ಉಂಡು ದಕ್ಷಿಣೆಯ ತಕ್ಕೊಂಡು ತಾಂಬೂಲವನು

ಸಂಭ್ರಮದಿಂದ ಸಾಮ್ರಾಜ್ಯನಾಳಿರಿಯೆಂದು

ಆನಂದದಿಂದರಸಿ ನಡೆದರು ೪೩

ಒಂದು ದಿನ ಮಕ್ಕಳು ಬಂದು ಕೋಪದಿ ಬರೆದ

ಗೊಂಬೆಯನೆ ಅಳಿಸಿ ಅಡಿಗೆಯನೆ

ಎಳೆತಂದು ಉಂಡು ನೈವೇದ್ಯ ಬಿಡದ್ದಾಗೆ ೪೪

ಅಂದಿನ ದಿನದಿಂದ ಬಂದಿತು ದಾರಿದ್ರ

ಒಂದುಶ್ಯಾರೆ ಕಾಳು ಹುಟ್ಟಿದಂತಾಯಿತು

ಮುಂದೇನು ನಮಗೆ ಗತಿಯೆಂದು೪೫

ಊರು ಬಿಟ್ಟು ಪರವೂರಿಗೆ ಹೋದಲ್ಲಿ ದಾರು ನಮ್ಮನು ತಿಳಿವೋರು ಕಟ್ಟಿಗೆಯ

ಮಾರಿ ಕಾಲವನು ಕಳೆವೋಣ ೪೬

ಊರೂರು ತಿರುಗುತಿ ಮೀರಿತ್ತನ್ನೆರಡ್ವರುಷ

ಮಾರುತಲಿ ಕಾಷ್ಠ ಮಗ ದೊರೆಯು ಆದಂಥ

ಸಾರಕ್ಕೆ ಬಂದು ಸೇರಿದರು ೪೭

ಗುಡ್ಡ ಗುಡ್ಡವ ತಿರುಗಿ ದೊಡ್ಡ ಹೊರೆಗಳ ಕಟ್ಟಿ

ದಡ್ಡಾಯದವೀಗ ನಮ್ಮಕೈ ಉದರಕ್ಕೆ

ದುಡ್ಡುಗಳು ದೊರೆಯುವೆಂದೆನುತ ೪೮

ಅರಸನ ಮನೆಯಲ್ಲಿ ಅರೆಸುತಿದ್ದರು ಗಚ್ಚು ಭೂರಿಸಿ ಕಟ್ಟಿಗೆಯ ದಣಿಯಲಾರದೆ ಗಚ್ಚು

ಅರೆಸುವೊ ಕೆಲಸಕ್ಕೊಂದಿದರು ೪೯

ಒಂದುದಿನ ಆ ರಾಜ ಬಂದ ಬಾಜಾರಕ್ಕೆ ತಂದೆ ತಾಯಿ ತಮ್ಮಂದಿರೆಂಡರು

ತನ್ನ ಸತಿ ಸುತರ ನೋಡಿ ಬೆರಗಾಗಿ ೫೦

ದೊರೆ ತಾನು ತನ್ನವರ ಗುರುತು ತಿಳಿದಾಕ್ಷಣದಿ ಅರಿತುಕೋ ಅವರ ವರ್ತಮಾನವಯೆಂದು

ಕಳಿಸಿದನು ತನ್ನ ಮಂತ್ರಿಯನ್ನು ೫೧

ದಾವ ದೇಶವು ನಿಮ್ಮ ನಾಮವೇನೆಂದೆನುತ ಹೇಳಿದರು ತಮ್ಮ ಸಕಲ ವಾರ್ತೆಗಳೆಲ್ಲ

ಕೇಳಿ ಸಂತಾಪದಿಂದಾಗ ೫೨

ಭಾಳ ಸಾಮುದ್ರಿಕ ಬಲ್ಲಸಿದ್ಧಾಂತಿಯನು

ಕೇಳಿದನು ಕರೆಸಿ ಮೀರಿತ್ತನ್ನೆರಡ್ವರುಷ

ಮೋರೆ ಭೆಟ್ಟಾಗೋತೆರನಾಗೆ ೫೩

ಕೊಪ್ಪರಿಗೆ ತೈಲ ತುಂಬಿಟ್ಟು ದೇವಾಲಯದಿ

ಸುತ್ತೆ ನಿಂತೆಲ್ಲ ಸುಮುಖವನ್ನೆ ನೋಡಿದರೆ ಮತ್ತಿದಕೆ ದೋಷವಿಲ್ಲೆಂದು ೫೪

ದೂತರನೆ ಕಳಿಸಿ ತನ್ನ ಮಾತಾಪಿತರ ಬಳಿಗೆ ನೀ ತಡೆಯದ್ದೋಗಿ ಅವರಲ್ಲಿದ್ದ ಸಕಲ

ಸಂತಾಪವನು ಬಿಡಿಸಿ ಬಾರೆಂದ ೫೫

ಹಿರಿಯಮಗ ದೊರೆಯಾಗಿಯಿರುವೋನೀವೂರಲ್ಲಿ

ಪರಮಭಾಗ್ಯ ಪುಣ್ಯಶಾಲಿಗಳು ನೀವೆಂದು

ಅರುವಿದನು ಅವರಿಗ್ವಾರ್ತೆಯನು ೫೬ ಮಗನ ವಾರ್ತೆಯ ಕೇಳಿ ಮನದಲ್ಲಿಗ್ಗುತ್ತಲಾಗ

ಜನನಿ ಜನಕ ತಮ್ಮಂದಿರೆಂಡಿರು ತನ್ನ

ಸತಿಸುತರು ಕೇಳಿ ಹರುಷದಲಿ ೫೭

ಊರು ಶೃಂಗರಿಸಿ ಬೀದಿ ತೋರಣ ಕಟ್ಟಿ ಸಾದು ಶ್ರೀಗಂಧ ಪರಿಮಳದ ತೊಳೆಯನು ಕೊಟ್ಟು

ಭೇರಿ ನಗಾರಿ ಹೊಯಿಸುತಲಿ ೫೮

ತೇಜಿ ಗಜ ಪಲ್ಲಕ್ಕಿ ಕಾಜಿನಂದಣ ರಥವು ಬಾಜಾರದೊಳಗೆ ಬಾಜಾಬಜಂತ್ರಿಯು ಊದುವೊ ಕಾಳೆ ಕಡೆಯಿಲ್ಲ ೫೯

ಎರೆಸಿಯೆಲ್ಲರಿಗ್ವಸ್ತ್ರ ಉಡಿಸಿ ಪೀತಾಂಬರವ ಕಳಿಸಿದನು ಮುತ್ತು ಮಾಣಿಕ್ಯದಾಭರಣ

ಇಡಿಸಿ ಹೂಮಾಲೆ ಮುಡಿಸುತಲಿ ೬೦

ನಡೆಮುಡಿ ಹಾಸುತಲಿ ಹಿಡಿದರು ಛತ್ತರಿಗೆ ಹಿಡಿ ಹಿಡಿ ಹೊನ್ನು ಕೊಡುತ ಬ್ರಾಂಬರಿಗೆಲ್ಲ

ಸಡಗರದಿ ನಡೆದ ಗುಡಿಗಾಗ ೬೧

ಎಣ್ಣೆಯೊಳಗೆ ಬಗ್ಗಿ ಎಲ್ಲರು ಮುಖ ನೋಡಿ ಅಣ್ಣ ತಮ್ಮಂದಿರು ಸತಿಸುತರೊಡಗೊಡ

ಮನ್ನಿಸಿದ ತಾಯಿತಂದೆಯರ ೬೨

ತುಪ್ಪದ್ ದೀವಿಗೆಯು ಕರ್ಪುರದ ಮಂಗಳಾರತಿಯು

ದ್ರಾಕ್ಷಿ ಖರ್ಜೂರ ಕದಳಿ ನಾರಿಕೇಳ ಫಲ

ಸಮರ್ಪಣೆ ಮಾಡಿ ಹರಿಗಾಗ ೬೩

ಗಂಧ ಅರಿಷಿಣವು ಕುಂಕುಮ ಕುಸುಮ ಮಲ್ಲಿಗೆಯ

ಬಂದ ಮುತ್ತೈದೇರಿಗೆಲ್ಲ ಉಡಿ ತುಂಬುತಲಿ ಆನಂದವಾಗಕ್ಕ ತಂಗಿಯರು ೬೪

ಖೀರು ಮಂಡಿಗೆ ಭಕ್ಷ್ಯಕ್ಷೀರ ಧೃತಸಕ್ಕರೆಯು ಸಾರು ಶಾಲ್ಯಾನ್ನ ಶಾಕಪಾಕಗಳೆಲ್ಲ

ಊರಜನಕುಣಿಸಿ ದಣಿಸಿದರು ೬೫

ದಕ್ಷಿಣೆ ವೀಳ್ಯ ತಕ್ಕೊಂಡು ಕೊಂಡಾಡುತಲಿ

ಲಕ್ಷಾಧಿಕಾರಿ ನೀನಾಗೆಂದು ದ್ವಿಜರೆಲ್ಲ

ಮಂತ್ರಾಕ್ಷತೆಗಳಾಕಿ ಹರುಷದಲಿ ೬೬

ಅರಸು ತನ್ನವರ ಕೂಡಾಗ ಅಂದಣವೇರಿ

ಬಿರುಸು ಬಾಣಗಳ ಬೀದಿಯಲಿ ಹೊಯಿಸುತಲಿ

ಹಿಡಿಸಿ ಹಿಲಾಲು ಬೆಳಕಲಿ ೬೭

ಬಣ್ಣಚ್ಚಾವುಡಿ ಚಿತ್ರ ಚಿನ್ನದ ಚೌಕಟ್ಟು

ಕನ್ನಡಿ ಮಾಲು ಕನಕದ ಕಂಬದರಮನೆಯ

ತನ್ನವರ ಕೂಡೊಕ್ಕ ಸಂಭ್ರಮದಿ ೬೮

ಎಂಟು ಮಕ್ಕಳಿಗೆ ತನ್ನ ನೆಂಟರಿಷ್ಟರ ಕೂಡಿ ಕಂಠದಾಭರಣ ಕಟ್ಟಿ ಮಾಂಗಲ್ಯವನು

ಸಂತೋಷದಲಿ ಮಾಡಿ ಲಗ್ನವನು ೬೯

ಹುಟ್ಟ ಬಡವರು ಜೋಳದ್ದಿಟ್ಟಿನೂಟವನುಂಡು ಕಷ್ಟದಾರಿದ್ರ ಕಳೆದು ಕಾಮ್ಯಾರ್ಥವನು ಮುತ್ತೈದೆತನಗಳನೆ ಪಡೆವೋರು ೭೦

ಮೊದಲೆ ಶ್ರಾವಣಮಾಸ ಬುಧವಾರ ದಿನದಲ್ಲಿ

ಬುಧ ಬೃಹಸ್ಪತಿಗಳ ಪೂಜೆ ಮಾಡಿದರಿನ್ನು ಮುದದಿಂದೊಲಿದು ವರವ ಕೊಡುವೋರು ೭೧

ಸಂತೋಷದಿಂದ ಸರ್ವರೂ ಪೂಜೆ ಮಾಡಿದರೆ

ಸಂತಾನ ಸಕಲ ಸಂಪತ್ತು ಶ್ರೀ ಲಕ್ಷ್ಮೀಕಾಂತ

ಒಲಿದ್ವರವ ಕೊಡುವೋನು ೭೨

ನೇಮದಿಂದೀ ಕಥೆ ಹೇಳಿ ಕೇಳಿದ ಜನಕೆ ಭೀಮೇಶಕೃಷ್ಣ ಒಲಿದು ಉದ್ದಾರವನು

ಮಾಡೆ ಮನೋಭೀಷ್ಟ ಪಡೆವೋರು ೭೩